ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಅನ್ನಪೂರ್ಣ ಮತ್ತು ಇತರರು -ವಿರುದ್ಧ ರಾಮ್ ಶೃಂಗಾರ ಪಾಲ್ ಮತ್ತು ಇತರರು

ಎಂ.ಎಫ್.ಎ.ಸಂಖ್ಯೆ: 23320/2012 (ಎಂವಿ), ದಿನಾಂಕ 21 ನೇ ಜನವರಿ, 2020

ತೀರ್ಪ

ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್:

ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಕೋರಿಕೆಯ ಮೇಲೆ ಅಪೀಲನ್ನು ಅಂಗೀಕರಿಸಿ ಅಂತಿಮ ವಿಲೆಗಾಗಿ ಕೈಗೆತ್ತಿಕೊಳ್ಳಲಾಗಿದೆ.

2. 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಎಂಎಸಿಟಿ, ಧಾರವಾಡ, ಇವರು ಮೊಕದ್ದಮೆ ಎಂ.ವಿ.ಸಿ.ಸಂಖ್ಯೆ:512/2008 ರಲ್ಲಿದಿನಾಂಕ: 04.02.2012 ರಂದು ಹೊರಡಿಸಿದ ತೀರ್ಪು ಮತ್ತು ಐತೀರ್ಪಿನಿಂದ ಬಾಧಿತರಾದ ಕ್ಷೇಮುದಾರರು ಈ ಅಪೀಲು ಅರ್ಜಿಯನ್ನು ದಾಖಲಿಸಿರುವರು.

3. ಕೇಮುದಾರರು ನ್ಯಾಯಾಧಿಕರಣದ ಮುಂದೆ ನಿವೇದಿಸಿದ ಸಂಗತಿಗಳು ಹೀಗಿದೆ.ದಿನಾಂಕ: 27.6.2007 ರಂದು ಅಪರಾಹ್ನ 2.45 ಸುಮಾರಿಗೆ ನರೇಂದ್ರ ಮತ್ತು ಹುಬ್ಬಳ್ಳಿಯ ನಡುವಿನ ರಸ್ತೆಯಲ್ಲಿ ಪಿ.ಬಿ. ರಸ್ತೆಯಲ್ಲಿ ಹೆಬ್ಬಳ್ಳಿ ಎಂಬುವವರಿಗೆ ಸೇರಿದ ಜಮೀನಿನ ಹತ್ತಿರ, ಉಲವಪ್ಪ ಎಂಬುವವನುಸಂಖ್ಯೆ: ಎಂ.ಎ. 43/ ಇ 3880 ನೋಂದಣಿ ಸಂಖ್ಯೆ ಹೊಂದಿರುವ ಲಾರಿಯಲ್ಲಿ ಹಮಾಲನಾಗಿ ಪ್ರಯಾಣಿಸುತ್ತಿದ್ದ.ಸದರಿ ಲಾರಿಯ ಚಾಲಕನು ಲಾರಿಯನ್ನು ತುಂಬಾ ಬೇಜವಾಬ್ದಾರಿಯಿಂದ ಮತ್ತು ನಿರ್ಲಕ್ಷ್ಯದಿಂದ ಚಲಾಯಿಸುತ್ತಿದ್ದು, ಲಾರಿ ಅವನ ನಿಯಂತ್ರಣ ತಪ್ಪಿ ರಸ್ತೆಯ ಬದಿಯ ಕಾಲುವೆಯಲ್ಲಿ ಮುಗುಚಿಬಿತ್ತು.ಅಪಘಾತದಿಂದಾಗಿ ಉಲವಪ್ಪನಿಗೆ ಮಾರಣಾಂತಿಕ ಗಾಯಗಳಾಗಿ ಸ್ಥಳದಲ್ಲಿಯೇ ಮೃತಹೊಂದಿದನು.1 ರಿಂದ 4 ನೇ ಕ್ಷೇಮುದಾರರಾದ ಮೃತನ ಪತ್ನಿ, ಮಗಳು ಮತ್ತು ಇಬ್ಬರು ಪುತ್ರರು ಮೃತನ ಆದಾಯದ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವರು.ಮೃತನು ಲಾರಿಯ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ.ಪ್ರತಿದಿನ 40 ರೂಪಾಯಿಗಳ ಬಾಟದೊಂದಿಗೆ ತಿಂಗಳಿಗೆ 6,000/- ರೂಪಾಯಿಗಳನ್ನು ಸಂಪಾದಿಸುತ್ತಿದ್ದನು.ಕ್ಷೇಮು ಅರ್ಜಿಯಲ್ಲಿ ಮೃತನ ತಾಯಿಯು ಸಹ 3 ನೇ ಪ್ರತಿವಾದಿಯಾಗಿ ಮೊಕದ್ದಮೆಯನ್ನು ದಾಖಲಿಸಿದ್ದಾರೆ. ಆದ್ದರಿಂದ ಕ್ಷೇಮುದಾರರು ಅನುಕ್ರಮವಾಗಿ 1 ಮತ್ತು 2 ನೇ ಪ್ರತಿವಾದಿಗಳಾಗಿರುವ ಆಪಾದಿತ ವಾಹನದ ಮಾಲೀಕ ಮತ್ತು ವಿಮಾಕರ್ತನ ವಿರುದ್ಧ ಇಪ್ಪತ್ತು ಲಕ್ಷ ರೂಪಾಯಿಗಳ ನಷ್ಟ ಪರಿಹಾರವನ್ನು ಕ್ಷೇಮು ಮಾಡಿರುವರು.

4. ನೋಟೀಸುಗಳಿಗೆ ಪ್ರತಿಕ್ರಿಯೆಯಾಗಿ, 1 ನೇ ಪ್ರತಿವಾದಿಯು ಗೈರು ಹಾಜರಾಗಿದ್ದು, ಅವನನ್ನು ಏಕಪಕ್ಷೀಯವಾಗಿ ಇರಿಸಲಾಗಿದೆ.2 ನೇ ಪ್ರತಿವಾದಿ/ವಿಮಾಕರ್ತನು ತನ್ನ ನ್ಯಾಯವಾದಿಗಳ ಮುಖಾಂತರ ನ್ಯಾಯಾಧಿಕರಣದ ಮುಂದೆ ಹಾಜರಾಗಿ ಕ್ಷೇಮು ಅರ್ಜಿಯಲ್ಲಿ ಮಾಡಿದ ಪ್ರತಿಪಾದನೆಗಳನ್ನು ನಿರಾಕರಿಸಿ ಆಕ್ಷೇಪಗಳ ಹೇಳಿಕೆಗಳನ್ನು ದಾಖಲಿಸಿದ.ಅಲ್ಲದೆ, ಲಾರಿಯ ಪರವಾನಗಿ, ವಿಮೆಯ ಮೂಲ ಪಾಲಿಸಿ, ಚಾಲನಾ ಪರವಾನಗಿ ಮುಂತಾದವುಗಳನ್ನು ಹಾಜರುಪಡಿಸುವುದು ತನ್ನ ಹೊಣೆಗಾರಿಕೆ ಎಂದು ವಾದಿಸಿದ್ದಾನೆ.ಮೃತನ ವಯಸ್ಸು, ಉದ್ಯೋಗ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ವಿಷಯದ ದಾಖಲೆಗಳನ್ನು ಹಾಜರುಪಡಿಸಲು

ನಿರಾಕರಿಸಿರುತ್ತಾನೆ.ಮೃತನು ಅಪಘಾತವಾದ ಲಾರಿಯಲ್ಲಿ ಕಾರ್ಮಿಕನಾಗಿರುವುದಿಲ್ಲ.ಅವನು ದಾಖಲಿಸಿದ ಹೆಚ್ಚುವರಿ ಆಕ್ಷೇಪಣೆಗಳ ವಾದಾಂಶದಲ್ಲಿ, ಮೃತನು ಲಾರಿಯಲ್ಲಿ ಅನಧಿಕೃತ ಪ್ರಯಾಣಿಕನಾಗಿದ್ದನು.ಹಾಗಾಗಿ ಅವನಿಗೆ ವಿಮಾಕಂಪೆನಿ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಹೊಣೆಯಾಗಿರುವುದಿಲ್ಲ ಮತ್ತು ಲಾರಿಯ ಚಾಲಕನೂ ಸಹ ಸಿಂಧುವಾದ ಮತ್ತು ಪರಿಣಾಮಕಾರಿಯಾದ ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಎಂದು ನಿವೇದಿಸಿರುವರು.

5. ಪಕ್ಷಕಾರರು ಮಂಡಿಸಿದ ನಿವೇದನೆಗಳ ಆಧಾರದ ಮೇಲೆ, ನ್ಯಾಯಾಧಿಕರಣವು ವಿವಾದಾಂಶಗಳನ್ನು ರೂಪಿಸಿದೆ.ಅವರ ಕ್ಲೇಮನ್ನು ಸಮರ್ಥಿಸುವ ನಿಟ್ಟಿನಲ್ಲಿ, 1 ನೇ ಕ್ಲೇಮುದಾರನನ್ನು 1 ನೇ ಪ್ರಾ.ಸಾ. ಆಗಿ ವಿಚಾರಣೆ ಮಾಡಲಾಯಿತು ಮತ್ತು ಒಬ್ಬ ಸಾಕ್ಷಿದಾರನನ್ನು 2 ನೇ ಪ್ರಾ.ಸಾ. ಆಗಿ ವಿಚಾರಣೆ ಮಾಡಲಾಯಿತು ಬ ಮತ್ತು 6 ದಸ್ತಾವೇಜುಗಳನ್ನು ನಿಶಾನೆ ಪಿ .1 ರಿಂದ ಪಿ .6 ಆಗಿ ಗುರುತು ಮಾಡಲಾಯಿತು.ಪ್ರತಿವಾದಿಗಳ ಪರವಾಗಿ, 2 ನೇ ಪ್ರತಿವಾದಿ/ವಿಮಾ ಕರ್ತನನ್ನು 1 ನೇ ಪ್ರಾ.ಸಾ. ಆಗಿ ಒಬ್ಬ ಸಾಕ್ಷಿದಾರನನ್ನು ವಿಚಾರಣೆ ಮಾಡಲಾಗಿದೆ ಮತ್ತು 2 ದಸ್ತಾವೇಜುಗಳನ್ನು ನಿಶಾನೆ ಆರ್ .1 ಮತ್ತು ಆರ್ .2 ಎಂದು ಗುರುತು ಮಾಡಲಾಯಿತು.

6. ನ್ಯಾಯಾಧಿಕರಣವು ಉಭಯ ಪಕ್ಷಕಾರರ ವಾದಗಳನ್ನು ಆಲಿಸಿದ ತರುವಾಯ, ಅರ್ಜಿಯ ದಿನಾಂಕದಿಂದ ಹಣದ ವಸೂಲಾತಿಯವರೆಗೆ ವಾರ್ಷಿಕ ಶೇ .6 ರಷ್ಟು ಬಡ್ಡಿ ದರದೊಂದಿಗೆ 5,47,000/- ರೂ.ಗಳ ನಷ್ಟ ಪರಿಹಾರವನ್ನು ನೀಡಿ ಪ್ರಶ್ನಿತ ತೀರ್ಪನ್ನು ಹೊರಡಿಸಿತು.ವಾಹನದ ಮಾಲೀಕನಾಗಿರುವ 1 ನೇ ಪ್ರತಿವಾದಿಗೆ ನಷ್ಟ ಪರಿಹಾರದ ಮೊತ್ತವನ್ನು ಠೇವಣಿ ಇಡುವುದಕ್ಕೆ ನಿರ್ದೇಶಿಸಿತು.2 ನೇ ಪ್ರತಿವಾದಿಯಾದ ವಿಮಾ ಕರ್ತನನ್ನು ದೋಷಮುಕ್ತಗೊಳಿಸಲಾಯಿತು.

7. ನ್ಯಾಯಾಧಿಕರಣ ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನಿಂದ ಬಾಧಿತರಾದ ಕ್ಲೇಮುದಾರರು, ಮೃತನು ವಾಹನದಲ್ಲಿ ಅನಧಿಕೃತ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದನೆಂಬ ಕಾರಣ ಮಾತ್ರದಿಂದಲೇ ವಾಹನದ ಮಾಲೀಕನ ಮೇಲೆ ಹೊಣೆಗಾರಿಕೆಯನ್ನು ವಿಧಿಸಿರುವಲ್ಲಿ ನ್ಯಾಯಾಧಿಕರಣದ ಕ್ರಮ ಸಮರ್ಥನೀಯವಾಗಿರುವುದಿಲ್ಲ ಎಂದು ಹೇಳಿ ಈ ಅಪೀಲನ್ನು ದಾಖಲಿಸಿರುತ್ತಾರೆ.ಮುಂದುವರೆಸುತ್ತಾ, 2 ನೇ ಪ್ರತಿವಾದಿಯು ನೀಡಿದ ಪಾಲಿಸಿಯು ಇಬ್ಬರು ಶುಲ್ಕ ಸಂದಾಯ ಮಾಡದಿರುವ ಪ್ರಯಾಣಿಕರ (ಎನ್ಎಫ್ಪಿಪಿ) ಹೊಣೆಯನ್ನು ಒಳಗೊಂಡಿದೆ ಮತ್ತು ಈ ಕಾರಣದಿಂದ ಈ ಪಾಲಿಸಿಯ ಅಡಿಯಲ್ಲಿ ಕೆಲಸಗಾರರ ನಷ್ಟವಾಗಿ (ಡಬ್ಲ್ಯುಸಿ) ಇಬ್ಬರು ವ್ಯಕ್ತಿಗಳಿಗೆ ರಕ್ಷಣೆ ಒದಗಿಸುವ ಹೊಣೆಯ ಜೊತೆಗೆ ಪಾಲಿಸಿಯ ಅಡಿಯಲ್ಲಿ ಮೃತನ ಹೊಣೆಯು ಒಳಗೊಂಡಿತ್ತು.ಕ್ಲೇಮುದಾರರು ಮಾಡಿದ ವಾದಾಂಶದಲ್ಲಿ ಸಹ, ನ್ಯಾಯಾಧಿಕರಣವು ಪರಿಗಣಿಸಿದ ಮೃತನ ಆದಾಯವು ಕನಿಷ್ಠತಮವಾಗಿದೆ ಮತ್ತು ಇತರ ಶೀರ್ಷಿಕೆಗಳ ಅಡಿಯಲ್ಲಿ ನೀಡಲಾದ ನಷ್ಟ ಪರಿಹಾರವು ಸಹ ಕನಿಷ್ಠತಮವಾಗಿದೆ ಎಂದು ನಿವೇದಿಸಿರುವರು.

8. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಆಲಿಸಲಾಗಿದೆ.

9. ಅಪೀಲುದಾರ/ಕ್ಲೇಮುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಅಪೀಲಿನ ವಿವರಣೆ ಪತ್ರದಲ್ಲಿ ಸಲ್ಲಿಸಿದ ಕಾರಣಗಳನ್ನು ಪುನರುಚ್ಚರಿಸುತ್ತಾ, ವಿಮಾಕರ್ತನು ಇಬ್ಬರು ಶುಲ್ಕ ಸಂದಾಯ ಮಾಡದ ಪ್ರಯಾಣಿಕರ (ಎನ್ಎಫ್ಪಿಐ) ಅಪಾಯಕ್ಕೆ ರಕ್ಷಣೆ ಒದಗಿಸುವ ಇಬ್ಬರು ಕಾರ್ಮಿಕ ನಷ್ಟದ (ಡಬ್ಲ್ಯುಸಿ) ಹೊಣೆಯನ್ನು ಪ್ರತ್ಯೇಕ ಕಂತುಗಳನ್ನು ಸಂಗ್ರಹಿಸಿರುವುದರಿಂದ ಸಹ ಒಳಗೊಂಡು, ಈ ಕ್ಲೇಮುದಾರರ ವಾದವು ಶುಲ್ಕ ಸಂದಾಯ

ಮಾಡದ ಪ್ರಯಾಣಿಕರ/ಪ್ರವರ್ಗದ (ಎನ್‌ಎಫ್ಪಿಪಿ) ಅಡಿಯಲ್ಲಿ ಬರುತ್ತದೆ ಮತ್ತು ಭಾರತೀಯ ಮೋಟಾರು ಸುಂಕದ 37- ಎ ಯ ದೃಷ್ಟಿಯಿಂದ ಪಾಲಿಸಿ ಅಡಿಯಲ್ಲಿ ಮೃತನ ಹೊಣೆಯೂ ಒಳಗೊಳ್ಳುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.

10. ಆತನ ನಿವೇದನೆಗೆ ಪೂರಕವಾಗಿ ಅಪೀಲುದಾರರ/ಕ್ಲೇಮುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಕೆಲವೊಂದು ತೀರ್ಪುಗಳನ್ನು ಅವಲಂಬನೆಯಾಗಿ ನೀಡಿದ್ದು, ಅವುಗಳು ಹೀಗಿವೆ:ಓರಿಯೆಂಟಲ್ ಇನ್ಶೂರನ್ಸ್ ಕಂಪನಿ ಅಮಿಟೆಡ್-ವಿರುದ್ಧ ತುಕರಾಂ ಆದಪ್ಪ ಮತ್ತು ಇತರರು, ಯುನೈಟೆಡ್ ಇಂಡಿಯಾ ಇನ್ಶೂರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಕಲಾವತಿ ಮತ್ತು ಇತರರು [2]; ನ್ಯಾಷನಲ್ ಇನ್ಶೂರನ್ಸ್ ಕಂಪನಿ ಅಮಿಟೆಡ್ -ವಿರುದ್ಧ ಅಲಪೀರ್ ಮತ್ತು ಮತ್ತೊಬ್ಬರು, ಮತ್ತು ಮನೌರ ಖತೂನ್ ಮತ್ತು ಇತರರು -ವಿರುದ್ಧ ರಾಜೇಶ್ ಕುಮಾರ್ ಸಿಂಗ್ ಮತ್ತು ಇತರರು*.

11. ಇದಕ್ಕೆ ತದ್ವಿರುದ್ಧವಾಗಿ, ವಿಮಾಕರ್ತನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಮೃತನು ಅಪಘಾತಕ್ಕೊಳಗಾದ ಲಾರಿಯಲ್ಲಿ ಹಮಾಲನಾಗಿ ಕೆಲಸ ಮಾಡುತ್ತಿದ್ದನೆಂದು ಕ್ಲೇಮುದಾರರ ವಾದವಾಗಿದ್ದು, ಅವರು ಆ ವಾದವನ್ನು ನ್ಯಾಯಾಧಿಕರಣದ ಮುಂದೆ ರುಜುವಾತುಪಡಿಸಲಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಹಾಗಾಗಿ ಅವನು ಅವನು ಸರಕು ವಾಹನದಲ್ಲಿ ಅನಧಿಕೃತ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದನೆಂದು ಅಭಿಪ್ರಾಯಪಡಲಾಗಿದೆ.ಅಂಥ ಅನಧಿಕೃತ ಪ್ರಯಾಣಿಕನ ಹೊಣೆಯು ಪಾಲಿಸಿಯಡಿಯಲ್ಲಾಗಲೀ ಅಥವಾ ಮೋಟಾರು ವಾಹನ ಅಧಿನಿಯಮದ 147 ನೇ ಪ್ರಕರಣದ ಅಡಿಯಲ್ಲಾಗಲೀ ಬರುವುದಿಲ್ಲ.ಆದ್ದರಿಂದ ನ್ಯಾಯಾಧಿಕರಣವು ಸಂಗತಿಗಳನ್ನು ಮತ್ತು ಕಾನೂನನ್ನು ಯುಕ್ತವಾಗಿಯೇ ವಿವೇಚಿಸಿ, ವಿಮಾಕರ್ತನನ್ನು ದೋಷಮುಕ್ತಗೊಳಿಸಿದೆ ಮತ್ತು ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲ ಎಂದು ವಾದಿಸಿದ್ದಾರೆ.ತಮ್ಮ ನಿವೇದನೆಗೆ ಪೂರಕವಾಗಿ ಮಾನ್ಯ ನ್ಯಾಯವಾದಿಗಳು ನ್ಯಾಷನಲ್ ಇನ್ಶೂರನ್ಸ್ ಕಂಪನಿ ಅಮಿಟೆಡ್ -ವಿರುದ್ಧ ಚೊಲ್ಲೇಟಿ ಭರತಮ್ಮ ಮತ್ತು ಇತರರು **(2008)1,**

ಎಸ್‌ಸಿಸಿ 423 ಉಲ್ಲೇಖಿಸಿದ್ದಾರೆ.

12. ಕೇಮುದಾರರು, ಮೃತ ಉಲವಪ್ಪ, 1 ನೇ ಪ್ರತಿವಾದಿಯ ಮಾಲೀಕತ್ವದ ನೋಂದಣಿಸಂಖ್ಯೆ: ಎಂಎ -43/ ಇ -3880 ಹೊಂದಿರುವ ಲಾರಿಯಲ್ಲಿ ಹಮಾಲನಾಗಿ ಪ್ರಯಾಣಿಸುತ್ತಿದ್ದನೆಂದು ನ್ಯಾಯಾಧಿಕರಣದ ಮುಂದೆ ವಾದಿಸಿದ್ದಾರೆ.ಮುಂದುವರೆಸುತ್ತಾ, ಮೃತನು ಪ್ರತಿ ದಿನದ ಬಾಟ 40.00 ರೂ.ಗಳೂ ಸೇರಿದಂತೆ ಪ್ರತಿ ತಿಂಗಳು 6,000/- ರೂ.ಗಳ ಆದಾಯವನ್ನು ಹೊಂದಿದ್ದನು.ಆದಾಗ್ಯೂ, ಆಪಾದಿತ ಲಾರಿಯಲ್ಲಿ ಮೃತನು ಹಮಾಲಿಯಾಗಿ ಕೆಲಸ ಮಾಡುತ್ತಿದ್ದ ಎಂಬುದನ್ನು ಕ್ಲೇಮುದಾರರು ರುಜುವಾತು ಪಡಿಸುವುದಕ್ಕೆ ಅವಶ್ಯ ಸಾಕ್ಷ್ಯವನ್ನು ಹಾಜರುಪಡಿಸುವುದಕ್ಕೆ ವಿಫಲರಾಗಿರುವರು.ಆಪಾದಿತ ಲಾರಿಯ ಮಾಲೀಕನಾದ, 1 ನೇ ಪ್ರತಿವಾದಿಯು ಗೈರುಹಾಜರಿಯಾಗಿರುವನು ಮತ್ತು ನ್ಯಾಯಾಧಿಕರಣದ ಮುಂದೆ ಅವನನ್ನು ಏಕಪಕ್ಷೀಯನೆಂದು ಗುರುತಿಸಲಾಗಿದೆ ಅಥವಾ ಸದರಿ ಲಾರಿಯಲ್ಲಿ ಮೃತನು ಹಮಾಲಿ ಕೆಲಸ ಮಾಡುತ್ತಿದ್ದನೆಂದು ರುಜುವಾತುಪಡಿಸುವುದಕ್ಕೆ ಅವನನ್ನು ಕ್ಲೇಮುದಾರರು ವಿಚಾರಣೆಗೆ ಒಳಪಡಿಸಿರುವುದಿಲ್ಲ.

13. ಅಂಥ ಸನ್ನಿವೇಶಗಳ ಅಡಿಯಲ್ಲಿ ನ್ಯಾಯಾಧಿಕರಣವು, ಮೃತನು ತಾನು ಪ್ರಯಾಣಿಸುತ್ತಿದ್ದ ಲಾರಿಯಲ್ಲಿ ಹಮಾಲಿಯಾಗಿ ಪ್ರಯಾಣಿಸುತ್ತಿದ್ದ ಎಂಬ ವಾದಾಂಶವನ್ನು ರುಜುವಾತುಪಡಿಸುವುದಕ್ಕೆ ಕ್ಲೇಮುದಾರರು

ವಿಫಲರಾಗಿರುವರು ಎಂದು ನಿರ್ಣಯಿಸಿದೆ.ಮತ್ತೊಂದು ಕಡೆಯಲ್ಲಿ, ನ್ಯಾಯಾಧಿಕರಣವು ಮೃತನು ಲಾರಿಯಲ್ಲಿ ಉಚಿತ ಪ್ರಯಾಣದ ಪ್ರಯಾಣಿಕನಾಗಿದ್ದನೆಂದು ನಿರ್ಣಯಿಸಿದೆ.ಆದುದರಿಂದ ವಿಮಾಕರ್ತನು ನಷ್ಟ ಪರಿಹಾರದ ವಿಮೆಗೆ ಹೊಣೆಗಾರನಾಗಿರುವುದಿಲ್ಲ.ನ್ಯಾಯಾಧಿಕರಣವು ದೂರಿನ ನಿಶಾನೆ ಪಿ .2 ಒಳಗೊಂಡಂತೆ ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಾಮರ್ಶಿಸಿದೆ.ಅದರಲ್ಲಿ ಅದು ಮೃತ ಉಲವಪ್ಪ ಮೈಲಾರಕ್ಕೆ ಹೋಗುವುದರ ಸಲುವಾಗಿಯೇ ಲಾರಿಯನ್ನು ಹತ್ತಿರುವನು ಎಂದು ಹೇಳಿದೆ.ಇದು 2 ನೇ ಪ್ರಾ.ಸಾ. ಸಾಕ್ಷ್ಯದಲ್ಲೂ ಬಹಿರಂಗಗೊಂಡಿದೆ.ಆದುದರಿಂದ ಆಪಾದಿತ ಲಾರಿಯಲ್ಲಿ ಮೃತನು ಹಮಾಲನಾಗಿ ಪ್ರಯಾಣಿಸುತ್ತಿದ್ದ ಎಂಬ ಅಂಶವನ್ನು ಕ್ಷೇಮುದಾರರು ರುಜುವಾತುಪಡಿಸಿರುವುದಿಲ್ಲ ಎಂದು ನ್ಯಾಯಾಧಿಕರಣವು ದಾಖಲಿಸಿದ ನಿರ್ಣಯವು ಯುಕ್ತವಾದ ನಿರ್ಣಯವಾಗಿದ್ದು, ಈ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ.

14. ಮೃತನು ಹಮಾಲಿಯಾಗಿ ಲಾರಿಯಲ್ಲಿ ಪ್ರಯಾಣಿಸುತ್ತಿರಲಿಲ್ಲವೆಂದು ದೃಢಪಡಿಸಿದಾಗ, ಎದುರಾಗುವ ಪ್ರಶ್ನೆಯೆಂದರೆ, ಮೃತನು ಲಾರಿಯಲ್ಲಿ ಅನಧಿಕೃತ ಪ್ರಯಾಣಿಕನಾಗಿ ಅಥವಾ ಶುಲ್ಕ ಸಂದಾಯ ಮಾಡದ ಪ್ರಯಾಣಿಕನಾಗಿ ಅಥವಾ ಉಚಿತ ಪ್ರಯಾಣಿಕನಾಗಿ ಪ್ರಯಾಣ ಮಾಡುತ್ತಿದ್ದನೇ ಎಂಬುದಾಗಿದೆ.ಈ ಸಂಬಂಧದಲ್ಲಿನ ನಿರ್ಣಯವು, ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾಕರ್ತನ ಹೊಣೆಗಾರಿಕೆಯನ್ನು ನಿರ್ಧರಿಸುತ್ತದೆ.ಕ್ಷೇಮುದಾರರ ಪರ ಮಾನ್ಯ ನ್ಯಾಯವಾದಿಗಳು, ಅವಲಂಬನೆಯಾಗಿ ಮೇಲೆ ಉಲ್ಲೇಖಿಸಿದ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಅಮಿಟೆಡ್ ಮೊಕದ್ದಮೆಯ ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿ ಈ ನ್ಯಾಯಾಲಯವು ಸದರಿ ಮೊಕದ್ದಮೆಯಲ್ಲಿ ಭಾರತೀಯ ಮೋಟಾರು ಸುಂಕಗಳು 13 ಮತ್ತು 14 ಅನ್ನು ಪರಿಗಣಿಸಿದೆ ಮತ್ತು ಈ ಮೊಕದ್ದಮೆಯ ಸಾಕ್ಷ್ಯಾಧಾರಗಳನ್ನಾಧರಿಸಿ ಮೃತನು ಶುಲ್ಕ ಸಂದಾಯ ಮಾಡದ ಪ್ರಯಾಣಿಕನಾಗಿದ್ದನೆಂದು ಅಥವಾ ಪ್ರತಿಫಲಕ್ಕಾಗಿ ಅವನನ್ನು ಕರೆದೊಯ್ಯಲಾಗುತ್ತಿತ್ತು ಎಂಬ ಅಭಿಪ್ರಾಯಪಟ್ಟಿದೆಯೆಂದು ನಿವೇದಿಸಿಕೊಂಡಿದ್ದಾರೆ.

15. ಈ ನ್ಯಾಯಾಲಯವು, ಭಾರತೀಯ ಮೋಟಾರು ಸುಂಕಗಳ 14 ಕ್ಕೆ ಸಂಬಂಧಿಸಿದಂತೆ 147 ( 1) (ಬಿ) ( i) ಪ್ರಕರಣವನ್ನು ಉಲ್ಲೇಖಿಸಿ, ಭಾರತೀಯ ಮೋಟಾರು ಸುಂಕಗಳ 14 ರಲ್ಲಿನ ಷರತ್ತಿನ ಉತ್ತರಾರ್ಧ ಭಾಗದ ನಿಷ್ಪಕ್ಷಪಾತದ ಅರ್ಥ ವಿವರಣೆಯ ಮೇಲೆ ಪಾಲಿಸಿಯ ಅಡಿಯಲ್ಲಿ ಅಪೀಲುದಾರನನ್ನು ಸ್ಪಷ್ಟವಾಗಿ ಹೊಣೆಗಾರರನ್ನಾಗಿ ಮಾಡುತ್ತದೆಂದು ಮತ್ತು ಮೃತನು ವಾಹನದಲ್ಲಿದ್ದ ಪ್ರಯಾಣಿಕನಾಗಿರುವನು ಮತ್ತು ವಾಹನದ ಹೊಣೆಯನ್ನು ಹೊತ್ತಿದ್ದ ಲಾರಿಯ ಚಾಲಕನು ಮೃತನು ವಾಹನವನ್ನು ಹತ್ತಲು ಅನುಮತಿಸಿದ್ದ ಎಂಬುದರಲ್ಲಿ ಸಂಶಯವಿಲ್ಲವೆಂದು ಅಭಿಪ್ರಾಯಪಡುತ್ತದೆ.ಮೃತನ ಉಪಸ್ಥಿತಿಯೂ ಅನಧಿಕೃತವಾಗಿರುವುದಿಲ್ಲ.ಮುಂದುವರೆದು, ಮೃತನು ಕನಿಷ್ಠ ಪಕ್ಷ ಅಪಘಾತ ಸ್ಥಳದವರೆಗಿನ ಪ್ರಯಾಣದೊಂದಿಗೆ ಸಂಪರ್ಕ ಹೊಂದಿದ್ದನೆಂದು ಅಭಿಪ್ರಾಯಪಡಲಾಗಿದೆ.ಸದರಿ ಮೊಕದ್ದಮೆಯಲ್ಲಿ ಸಹವಾಸಿಯಾಗಿರುವ ನಿವಾಸಿಯು, ಮುಂಬೈನಿಂದ ಹೈದರಾಬಾದಿಗೆ ಸರಕುಗಳನ್ನು ಸಾಗಣೆ ಮಾಡುತ್ತಿದ್ದ ಸರಕು ಸಾಗಣೆ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಕ್ಷೇಮುದಾರನಾಗಿದ್ದ.ಆದ್ದರಿಂದ ಸರಕುಗಳ ಮಾಲೀಕನ ಪ್ರತಿನಿಧಿಯಾಗಿ ಸದರಿ ವಾಹನದಲ್ಲಿ ಅವನು ಪ್ರಯಾಣಿಸುತ್ತಿದ್ದನು.ಇಂತಹ ಸನ್ನಿವೇಶಗಳಲ್ಲಿ ವಿಮಾಕರ್ತನು ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿದ್ದಾನೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

16. ಮೇಲೆ ಹೇಳಲಾದ ನ್ಯಾಷನಲ್ ಇನ್ಶೂರನ್ಸ್ ಕಂಪನಿ ಅಮಿಟೆಡ್ನ ಮೊಕದ್ದಮೆಯಲ್ಲಿ, ಈ ನ್ಯಾಯಾಲಯ, ಮತ್ತೆ ಈ ಪ್ರಕರಣವನ್ನು ಪರಿಗಣನೆಗೆ ತಂದುಕೊಂಡಿದ್ದು, ಅದರಲ್ಲಿ ಸರಕುಗಳ ಮಾಲೀಕನಂತೆ ಸರಕುಗಳ ವಾಹನದಲ್ಲಿ ಕ್ಲೇಮುದಾರನು ಪ್ರಯಾಣಿಸುತ್ತಿದ್ದನೆಂದು ಮತ್ತು ಅಂಥ ಮಾಲೀಕರ ಸಂಖ್ಯೆಯು ಅನುಮತಿಸಿದ ಆಸನ ಸಾಮರ್ಥ್ಯವನ್ನು ಮೀರತಕ್ಕದ್ದಲ್ಲವೆಂದು ನಿರ್ಣಯಿಸಿದೆ.ಆದುದರಿಂದ, ಸರಕುಗಳ ವಾಹನದಲ್ಲಿ ಸರಕುಗಳೊಂದಿಗೆ ವ್ಯಕ್ತಿಯು ಪ್ರಯಾಣಿಸುತ್ತಿದ್ದ ಮೊಕದ್ದಮೆ ಇದಾಗಿದೆ ಎಂದು ಅದು ಒತ್ತಿ ಹೇಳಿದೆ.

17. ಮೇಲೆ ಹೇಳಲಾದ ಒರಿಯೆಂಟಲ್ ಇನ್ಶೂರನ್ಸ್ ಕಂಪನಿ ಅಮಿಟೆಡ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾ ಕಂಪನಿಯ ಹೊಣೆಗಾರಿಕೆಯನ್ನು ಪರಿಗಣಿಸಿದೆ.ಇದು ಒಪ್ಪಂದದ ಹೊಣೆಗಾರಿಕೆಗಳಿಂದ ಉದ್ಭವಿಸಿದ್ದು, ಅದರಲ್ಲಿ ಶುಲ್ಕ ಸಂದಾಯ ಮಾಡದ ಪ್ರಯಾಣಿಕನ ಅಪಾಯಕ್ಕೆ ರಕ್ಷಣೆ ಒದಗಿಸುತ್ತದೆ.ಈ ನ್ಯಾಯಾಲಯವು ಮಂಡಿಸಿದ ಅಭಿಪ್ರಾಯಗಳು ಈ ಮುಂದಿನಂತಿವೆ:

ಈ ಮುಂದಿನ ಪ್ರತಿಪಾದನೆ ಮೂಡುತ್ತದೆ:

1) ಮೋಟಾರು ವಾಹನಗಳ ಅಧಿನಿಯಮ, 1939 ರ ಉಪಬಂಧಗಳ ಅಡಿಯಲ್ಲಿ ರಕ್ಷಣೆ ಒದಗಿಸಲಾದ ಕ್ಲೇಮುಗಳಲ್ಲಿ, ಸರಕುಗಳ ವಾಹನದಲ್ಲಿ ಪ್ರಯಾಣಿಸುವ ಉಚಿತ ಪ್ರಯಾಣಿಕರು, ಶುಲ್ಕ ಸಂದಾಯ ಮಾಡದ ಪ್ರಯಾಣಿಕರು ಮತ್ತು ಸರಕುಗಳ ಮಾಲೀಕ ಅಥವಾ ಅವನ ಪ್ರತಿನಿಧಿಗಳು ಪ್ರಯಾಣಿಸುತ್ತಿದ್ದಾಗ, ಆ ವಾಹನವು ಅಪಘಾತಕ್ಕೆ ಒಳಗಾಗಿ ಪ್ರಯಾಣಿಕರುಗಳಿಗೆ ಗಾಯಗಳುಂಟಾದಾಗ ಅಥವಾ ಪ್ರಯಾಣಿಕರು ಸಾವನ್ನಪ್ಪಿದರೆ ಆ ಮೃತ ಪ್ರಯಾಣಿಕರಾರಿಗೂ ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾ ಕ ಂ ಪನಿ ಹೊಣೆಯಾಗಿರುವುದಿಲ್ಲ.

2) ಮೋಟಾರು ವಾಹನಗಳ ಅಧಿನಿಯಮ, 1988 ರ ಉಪಬಂಧಗಳ ಅಡಿಯಲ್ಲಿ ರಕ್ಷಣೆ ಒದಗಿಸಲಾದ ಕ್ಲೇಮುಗಳಲ್ಲಿ,ದಿನಾಂಕ: 1.7.1989 ರಿಂದ 14.11.1994 ರ ವರೆಗೆ ಉದ್ಭವವಾದ ಅಂದರೆ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನದಿಂದ ವಿಮಾ ಕಂಪನಿ ಸರಕು ವಾಹನದಲ್ಲಿ ಪ್ರಯಾಣಿಸುವ ಉಚಿತ ಪ್ರಯಾಣಿಕರು, ಶುಲ್ಕ ಸಂದಾಯ ಮಾಡದ ಪ್ರಯಾಣಿಕರು ಮತ್ತು ಸರಕುಗಳ ಮಾಲೀಕ ಅಥವಾ ಅವನ ಅಧಿಕೃತ ಪ್ರತಿನಿಧಿಗಳು ಪ್ರಯಾಣಿಸುತ್ತಿದ್ದಾಗ, ಆ ವಾಹನವು ಅಪಘಾತಕ್ಕೆ ಒಳಗಾಗಿ ಪ್ರಯಾಣಿಕರುಗಳಿಗೆ ಗಾಯಗಳುಂಟಾದಾಗ ಅಥವಾ ಪ್ರಯಾಣಿಕರುಗಳು ಸಾವನ್ನಪಿದರೆ, ಆ ಮೃತ ಪ್ರಯಾಣಿಕರಾರಿಗೂ ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾ ಕಂಪನಿಯು ಹೊಣೆಯಾಗಿರತಕ್ಕದ್ದಲ್ಲ.

3) ಮೋಟಾರು ವಾಹನಗಳ ಅಧಿನಿಯಮ, 1988 ರ ಉಪಬಂಧಗಳ ಅಡಿಯಲ್ಲಿ ರಕ್ಷಣೆ ಒದಗಿಸಲಾದ ಕ್ಲೇಮುಗಳಲ್ಲಿ, ತಿದ್ದುಪಡಿಯ ತರುವಾಯ, ಅ 0 ದರೆದಿನಾಂಕ: 14.11.1994 ರ ನಂತರದಲ್ಲಿ, ಸರಕುಗಳ ಮಾಲೀಕ ಅಥವಾ ಸರಕುಗಳ ವಾಹನದಲ್ಲಿ ಪ್ರಯಾಣಿಸುತ್ತಿರುವ ಆತನ ಅಧಿಕೃತ ಪ್ರತಿನಿಧಿಗೆ ಆ ಸರಕುಗಳ ವಾಹನದಲ್ಲಿ ಪ್ರಯಾಣಿಸುತ್ತಿರುವಾಗ ಆ ಅಪಘಾತ ಸಂಭವಿಸಿ ಅವನಿಗೆ ಗಾಯವುಂಟಾದರೆ ಅಥವಾ ಅವನು ಸಾವನ್ನಪ್ಪಿದರೆ, ಅವರಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾ ಕಂಪನಿಯೂ ಹೊಣೆಯಾಗಿರುತ್ತದೆ.

4) ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923 ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಹೊಣೆಗಾರಿಕೆಯ ಮಟ್ಟಿಗೆ ಮಾತ್ರ ವಾಹನ ಚಾಲನೆಯಲ್ಲಿ ತೊಡಗಿರುವ ವಿಮೆದಾರನ ನೌಕರನಿಗೆ ಎಂದರೆ ವಾಹನ ಚಾಲಕ, ಸಾರ್ವಜನಿಕ ಸೇವಾ ವಾಹನದ ನಿರ್ವಾಹಕನಾಗಿ ಅಥವಾ ಟಿಕೆಟ್ ಪರಿಶೀಲಕನಾಗಿ ತೊಡಗಿರುವ ನೌಕರನಿಗೆ ಮತ್ತು ಸರಕು ಸಾಗಣೆ ವಾಹನದಲ್ಲಿ ಪ್ರಯಾಣಿಸುವ ನೌಕರನಿಗೆ ನಷ್ಟ ಪರಿಹಾರ ಸ ಂ ದಾಯ ಮಾಡುವುದಕ್ಕೆ ವಿಮಾ ಕಂಪನಿಯು ಶಾಸನೋಕ್ತವಾಗಿ ಹೊಣೆಗಾರಿಕೆಯನ್ನು ಹೊಂದಿದೆ.

18. ವಿಮಾಕರ್ತನ ವಿರುದ್ಧ ಹೊಣೆಗಾರಿಕೆಯನ್ನು ವಿಧಿಸುವ ಸಲುವಾಗಿ ಯಾವ ಸನ್ನಿವೇಶಗಳ ಅಡಿಯಲ್ಲಿ ಕ್ಷೇಮುದಾರರು ಬರುತ್ತಾರೋ ಅಂಥ ಒಂದು ಸನ್ನಿವೇಶವನ್ನು ಕೇಮುದಾರರು ರುಜುವಾತುಪಡಿಸುವ ಅಗತ್ಯವಿದೆ.ಕ್ಷೇಮುದಾರರು, ಭಾರತೀಯ ಮೋಟಾರು ಸುಂಕಗಳ 37 ಎ ಯಲ್ಲಿ ನಿರೂಪಿಸಿರುವಂತೆ ಮೃತನು ಸರಕುಗಳ ಮಾಲೀಕನಾಗಿಯಾಗಲೀ ಅಥವಾ ಸರಕುಗಳ ಮಾಲೀಕನ ಪ್ರತಿನಿಧಿಯಾಗಿಯಾಗಲೀ, ಅಥವಾ ಒಂದಲ್ಲ ಒಂದು ರೂಪದಲ್ಲಿ ಪ್ರಯಾಣದೊಂದಿಗೆ ನೇರವಾಗಿ ಸಂಪರ್ಕ ಹೊಂದಿರುವ ಯಾರೇ ಇತರ ವ್ಯಕ್ತಿಯಾಗಿರುವನೆಂದು ಸುಸ್ಥಾಪಿಸಬೇಕಾಗುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲಿ ರುಜುವಾತಾದ ಸಂಗತಿಗಳಿಂದ, ಮೃತನು ಸರಕುಗಳ ವಾಹನದಲ್ಲಿ ಪ್ರಯಾಣಿಸುತ್ತಿದ್ದನೆಂದು ತಿಳಿದುಬರುತ್ತದೆ ಮತ್ತು ಮೃತನು ಸದರಿ ವಾಹನದಲ್ಲಿ ಹಮಾಲಿಯಾಗಿ ಪ್ರಯಾಣಿಸುತ್ತಿದ್ದನೆಂಬುದು ಕ್ಷೇಮುದಾರರ ವಾದವಾಗಿದ್ದು, ಈ ಅ ಂ ಶವನ್ನು ಕ್ಷೇಮುದಾರರು ನ್ಯಾಯಾಧಿಕರಣದ ಮು ಂ ದೆ ರುಜುವಾತುಪಡಿಸಿರುವುದಿಲ್ಲ.ಕ್ಷೇಮುದಾರರು ಮೃತನು ಸದರಿ ವಾಹನದ ಹಮಾಲಿಯಾಗಿ ಪ್ರಯಾಣಿಸುತ್ತಿದ್ದನೆಂದು ರುಜುವಾತು ಪಡಿಸುವುದಕ್ಕೆ ವಿಫಲರಾದಾಗ, ಆಗ ಅವನನ್ನು ಶುಲ್ಕ ಸಂದಾಯ ಮಾಡಿದ ಪ್ರಯಾಣಿಕನೆಂದು ಅಥವಾ ಅನಧಿಕೃತ ಪ್ರಯಾಣಿಕನೆಂದು ಅಥವಾ ಉಚಿತ ಪ್ರಯಾಣಿಕನೆಂದು ಅದು ಪರಿಗಣಿಸಬೇಕಾಗುತ್ತದೆ.

19. ಮೇಲೆ ಹೇಳಲಾದ ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಚೋಲ್ಲೇಟಿ ಭರತಮ್ಮ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ 23 ನೇ ಪ್ಯಾರಾದಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

23. ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಿಗಣಿಸಿದ ಮೇಲೆ, ಅದು ಈ ಮುಂದಿನಂತೆ ಅಭಿಪ್ರಾಯಪಟ್ಟಿತ್ತು:

" ಲಾರಿಯಲ್ಲಿ ಅನುಮತಿಸಿದ ಆಸನದ ಸಾಮರ್ಥ್ಯವು ಲಾರಿಯ ಚಾಲಕ ಮತ್ತು ವತು ಕ್ಲೀನರ್ ಸೇರಿದ ಸೇರಿದ ಂ ಂ ತೆ ತೆ ' 3 ' ಮ ಂ ದಿ ಮಾತ್ರವಾಗಿರುವುದರಿಂದ, ಸರಕುಗಳ ಮಾಲೀಕನಂತೆ ಶುಲ್ಕ ಸಂದಾಯ ಮಾಡದ ಪ್ರಯಾಣಿಕನಾಗಿ ಒಬ್ಬ ವ್ಯಕ್ತಿ ಮಾತ್ರವೇ ಲಾರಿಯ ಕ್ಯಾಬಿನ್ನಲ್ಲಿ, ಪ್ರಯಾಣಿಸಬಹುದಾಗಿರುವುದರಿಂದ ಮತ್ತು ಒಪ್ಪಿಕೊಂಡಿರುವಂತೆ ಮೃತನು ಆಸನ ಸಾಮರ್ಥ್ಯವನ್ನು ಮೀರಿ, ಪರ್ಮಿಟ್ನ ನಿಬಂಧನೆಗಳನ್ನು ಮತ್ತು ಮೋಟಾರು ವಾಹನಗಳ ಅಧಿನಿಯಮದ 252 ( 2) ನೇ ನಿಯಮವನ್ನು ಉಲ್ಲಂಘಿಸಿ ಕ್ಯಾಬಿನ್ನಲ್ಲಿ ಪ್ರಯಾಣಿಸಿರುವುದರಿಂದ ಗಾಯಗೊಂಡವರಿಗೆ ಮತ್ತು ಮೃತನ ಕಾನೂನು ಸಮ್ಮತ ಪ್ರತಿನಿಧಿಗಳೆಲ್ಲರಿಗೂ 1 ನೇ ಪ್ರತಿವಾದಿಯೊಂದಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು 2 ನೇ ಪ್ರತಿವಾದಿಯ ಮೇಲೆ ವಿಧಿಸಲಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.ಸರಕುಗಳ ಮಾಲೀಕನಾಗಿರುವ ಶುಲ್ಕ ಸಂದಾಯ ಮಾಡದ ಒಬ್ಬ ಪ್ರಯಾಣಿಕನ ಸಂಬಂಧದಲ್ಲಿ ಮಾತ್ರ ಬ 1 ನೇ ಪ್ರತಿವಾದಿಯೊಂದಿಗೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರರಾಗಿರುತ್ತಾರೆ.ಹಾಗಾಗಿ, ಭಾರತೀಯ ಮೋಟಾರು ಸುಂಕದ 14 (ಬಿ) ಯ ಹಿಂಬರಹದ ಪ್ರಕಾರ ಲಾರಿಯಲ್ಲಿ ಮಾಲೀಕರಂತೆ ಪ್ರಯಾಣ

ಮಾಡುವ ವ್ಯಕ್ತಿಗಳ ಸಂಖ್ಯೆಗಳಿಗಾಗಿ ಹೆಚ್ಚುವರಿ ಕಂತುಗಳನ್ನು ಸಂದಾಯ ಮಾಡದ ಹೊರತು, 2 ನೇ ಪ್ರತಿವಾದಿಯ ಮೇಲೆ ಹೊಣೆಗಾರಿಕೆಯನ್ನು ವಿಧಿಸಬಾರದು ಎಂಬುದು ನನ್ನ ಅಭಿಪ್ರಾಯವಾಗಿದೆ.ಅಲ್ಲದೆ, ಎಲ್ಲ ಅರ್ಜಿದಾರರು ಮತ್ತು ಮೃತರು ಭತ್ತದ ಮಾಲೀಕರಾಗಿ ಪ್ರಯಾಣಿಸುತ್ತಿದ್ದರೆಂದು ಭಾವಿಸಬಾರದು.ಭತ್ತವನ್ನು ಚೀಲಗಳಲ್ಲಿ ಇಡಲಾಗಿದೆಯೆಂದು ಅ ಹೇಳಲಾಗಿದ್ದು, ಲಾರಿಯಲ್ಲಿ ಸಡಿಲವಾಗಿ ಇಟ್ಟಿದ್ದರಿಂದ, ಎಲ್ಲ ಮಾಲೀಕರ ಪರವಾಗಿ ಯಾರಾದರೂ ಒಬ್ಬರು ಲಾರಿಯ ಮಾಲೀಕರಾಗಿ ಪ್ರಯಾಣಿಸಿದರೆ ಸಾಕಿತ್ತು.ಆಂಧ್ರ ಪ್ರದೇಶ ಮೋಟಾರು ವಾಹನಗಳ ನಿಯಮಗಳ 277 ( 3) ನೇ ನಿಯಮದಲ್ಲಿ ಶಾಸನದ ಅಡಿಯಲ್ಲಿನ ನಿಯಮದಲ್ಲಿ ಉಪಬಂಧಿಸಿದಂತವರನ್ನು ಹೊರತುಪಡಿಸಿ ಸರಕುಗಳ ವಾಹನದಲ್ಲಿ ಯಾರೇ ವ್ಯಕ್ತಿಯನ್ನು ಕರೆದೊಯ್ಯತಕ್ಕದ್ದು ಮತ್ತು ಸರಕುಗಳ ವಾಹನದಲ್ಲಿ ಕರೆದೊಯ್ಯಲು ಅನುಮತಿ ನೀಡಲಾದ ಏಕೈಕ ವ್ಯಕ್ತಿ ಸರಕುಗಳ ಮಾಲೀಕ ಅಥವಾ ಕೂಲಿಕಾರನಾಗಿರಬೇಕು ಅಥವಾ ಮಾಲೀಕನ ನಂಬಿಕಸ್ಥ ನೌಕರನಾಗಿರಬೇಕು ಅಥವಾ ಕೂಲಿಕಾರನಾಗಿರಬೇಕು ಮತ್ತು ಸರಕು ವಾಹನದಲ್ಲಿ ಕರೆದೊಯ್ಯಬಹುದಾದ ಅಂಥ ವ್ಯಕ್ತಿಗಳ ಒಟ್ಟು ಸಂಖ್ಯೆ ಚಾಲಕನು ಒಳಗೊಂಡಂತೆ ಏಳು ಮಂದಿಯನ್ನು ಮೀರಬಾರದು ಎಂದು ಸ್ಪಷ್ಟವಾಗಿ ನಿರೂಪಿಸಿದೆ.252 ( 2) ನೇ ನಿಯಮದ ಪ್ರಕಾರ ( 2) ನೇ ಖಂಡದಲ್ಲಿರುವಂತೆ ಆಸನದ ಸಾಮರ್ಥ್ಯವನ್ನು ಮೀರಿ ವಾಹನದ ಕ್ಯಾಬಿನ್ನಲ್ಲಿ ಯಾರೇ ವ್ಯಕ್ತಿಯನ್ನು ಕರೆದೊಯ್ಯತಕ್ಕದ್ದಲ್ಲ.ಸರಕುಗಳ ಹೇರಿನ ಮೇಲೆಯಾಗಲೀ ಅಥವಾ ಅನ್ಯಥಾವಾಗಿಯಾಗಲೀ ಯಾರೇ ವ್ಯಕ್ತಿಯನ್ನು ವಾಹನದಲ್ಲಿ ಕರೆದೊಯ್ಯತಕ್ಕದ್ದಲ್ಲ.4 ನೇ ನಿಯಮವು, ರಸ್ತೆ ಸಾರಿಗೆ ಪ್ರಾಧಿಕಾರಕ್ಕೆ (ಆರ್.ಬಿ.$$_0_$$) ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಕರೆದೊಯ್ಯುವುದಕ್ಕೆ ಅನುಮತಿ ನೀಡಲು ಅಧಿಕೃತಗೊಳಿಸುತ್ತದೆ.ನಿಶಾನೆ ಬಿ .1 ಮತ್ತು ಬಿ .3 ಯ ಪ್ರಕಾರ ಲಾರಿಯ ಆಸನ ಸಾಮರ್ಥ್ಯವು 3 ' ಮಾತ್ರ ಆಗಿರುವುದರಿಂದ ಮತ್ತು ನಿಶಾನೆ ಬಿ .2 ಪಾಲಿಸಿಯು ಸರಕುಗಳ ಮಾಲೀಕನಿಗೆ ಮಾತ್ರ ರಕ್ಷಣೆಯನ್ನು ಒದಗಿಸುವುದರಿಂದ, ಲಾರಿಯ ಸರಕಿನ ಹೇರಿನ ಮೇಲೆ 40 ರಿಂದ 42 ವ್ಯಕ್ತಿಗಳು ಲಾರಿಯಲ್ಲಿ ಪ್ರಯಾಣ ಮಾಡುವುದನ್ನು ಅನುಮತಿಸುವುದಿಲ್ಲ ಮತ್ತು ರಸ್ತೆ ಸಾರಿಗೆ ಪ್ರಾಧಿಕಾರವು ಆಸನ ಸಾಮರ್ಥ್ಯಕ್ಕಿಂತ ಹೆಚ್ಚಿನ ಜನರನ್ನು ಕರೆದೊಯ್ಯಲು ಅನುಮತಿ ನೀಡಿದೆ ಎಂದು ತೋರಿಸಲು ಯಾವುದೇ ಸಾಕ್ಷ್ಯಾಧಾರ ಇಲ್ಲದಿರುವುದರಿಂದ, ಆದರೆ ಮತ್ತೊಂದು ಕಡೆಯಲ್ಲಿ ಅಂಥ ವಾಹನದ ಪರವಾನಗಿಯನ್ನು ರದ್ದು ಮಾಡುವುದರಿಂದ, ನಾನು, ನಷ್ಟ ಪರಿಹಾರಕ್ಕೆ ಸಂಬಂಧಿಸಿದ ಹೊಣೆಯನ್ನು ಪ್ರತಿವಾದಿಗೆ ವಿಧಿಸಬಾರದೆಂಬ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಅಂಗೀಕರಿಸುತ್ತೇನೆ."

20. ಪ್ರಸ್ತುತ ಮೊಕದ್ದಮೆಯಲ್ಲಿ ಲಾರಿಯಲ್ಲಿ ಕರೆದೊಯ್ಯಲು ವಿಮಾದಾರನು ಮೃತನಿಗೆ ಅನುಮತಿ ನೀಡಿದ್ದನು ಎಂಬುದನ್ನು ಕ್ಲೇಮುದಾರರು ರುಜುವಾತುಪಡಿಸಿರುವುದಿಲ್ಲ.ನಿಶಾನೆ ಆರ್ .1 ರಲ್ಲಿ ಹಾಜರುಪಡಿಸಿದ ವಿಮಾ ಪಾಲಿಸಿಯಲ್ಲಿ 2 ಕೆಲಸಗಾರರ ನಷ್ಟ ಪರಿಹಾರಕ್ಕಾಗಿ ಮತ್ತು 2 ಶುಲ್ಕ ಸಂದಾಯ ಮಾಡದ ಪ್ರಯಾಣಿಕರಿಗಾಗಿ ವಿಮಾ ಕಂತುಗಳನ್ನು ಸಂಗ್ರಹಿಸಿರುವುದು ಕಂಡು ಬರುತ್ತದೆ.ಪಾಲಿಸಿಯಲ್ಲಿ ನೀಡಲಾದ ಭಾರತೀಯ ಮೋಟಾರು ಸುಂಕದ ಹಿಂಬರಹ ಸಂಖ್ಯೆಗಳು ಭಾರತೀಯ ಮೋಟಾರು ಸುಂಕದ 37 ಎಯನ್ನು ಸಹ ಉಲ್ಲೇಖಿಸುತ್ತವೆ.ವಿಮಾದಾರನ ಮೂಲಕ ನಿಯೋಜಿತನಾಗದಿರುವ ಮತ್ತು ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಕರೆದೊಯ್ಯದಿರುವ ಯಾರೇ ವ್ಯಕ್ತಿಗೆ ಆದರೆ ಟ್ರಕ್ನ ಸನ್ನದುದಾರ ಅಥವಾ ಅವನ ಪ್ರತಿನಿಧಿಯಾಗಿರುವ ವ್ಯಕ್ತಿ ಅಥವಾ ವಾಹನದಲ್ಲಿ 0 ಅಥವಾ ಮುಕ್ತವಾಗಿ ಅಥವಾ ವಾಹನ ಪ್ರವೇಶಿಸುವ ಮೂಲಕ ಅಥವಾ ವಾಹನದ ಮೇಲೆ ಏರುವ ಮೂಲಕ ಕರೆದೊಯ್ಯಲಾಗುತ್ತಿರುವ ಒಂದಲ್ಲಾ ಒಂದು ರೀತಿಯಲ್ಲಿ ಪ್ರಯಾಣದೊಂದಿಗೆ

ನೇರವಾಗಿ ಸಂಬಂಧಿಸಿದ ಯಾರೇ ಇತರ ವ್ಯಕ್ತಿಗೆ ಮರಣ ಅಥವಾ ದೈಹಿಕವಾಗಿ ಗಾಯಗಳಾದ ಸಂಬಂಧದಲ್ಲಿ ಐಎಂಟಿ ವಿಮಾಕರ್ತನ ಹೊಣೆಗಾರಿಕೆಯನ್ನು ಉಲ್ಲೇಖಿಸುತ್ತವೆ.

21. ಈ ಮೊಕದ್ದಮೆಯಲ್ಲಿ, ಮೃತನು ಮೈಲಾರಕ್ಕೆ ಹೋಗುವ ಸಲುವಾಗಿಯೇ ಲಾರಿಯಲ್ಲಿ ಪ್ರಯಾಣಿಸುತ್ತಿದ್ದನು ಎಂಬ ಸಾಕ್ಷ್ಯವು ಸುಸ್ಪಷ್ಟವಾಗಿದ್ದು, ಅದನ್ನು ಮೃತನು ಒಂದಲ್ಲ ಒಂದು ರೀತಿ ಪ್ರಯಾಣಕ್ಕೆ ಸಂಬಂಧಿಸಿದಂತೆ ಪ್ರಯಾಣಿಸುತ್ತಿದ್ದನೆಂದು ಪರಿಭಾವಿಸಬಾರದು.

22. ಈ ಸನ್ನಿವೇಶಗಳ ಅಡಿಯಲ್ಲಿ, ಈ ನ್ಯಾಯಾಲಯವು, ಮೃತನ ಹೊಣೆಯೂ ಶುಲ್ಕ ಸಂದಾಯ ಮಾಡದ ಪ್ರಯಾಣಿಕನ ಪ್ರವರ್ಗದ ಅಡಿಯಲ್ಲಿ ನಿಶಾನೆ ಆರ್ .1 ಪಾಲಿಸಿಯ ಅಡಿಯಲ್ಲಿ ಮೃತನ ಅಪಾಯಕ್ಕೆ ರಕ್ಷಣೆ ಒದಗಿಸಿಲ್ಲ ಎಂದು ಅದು ನಿರ್ಣಯಿಸುತ್ತದೆ.ತತ್ಪರಿಣಾಮವಾಗಿ, ಈ ನ್ಯಾಯಾಲಯ ಮೃತನು ಲಾರಿಯಲ್ಲಿ ಶುಲ್ಕವಿಲ್ಲದೆ ಎಂದರೆ ಉಚಿತ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದ ವ್ಯಕ್ತಿ ಎಂದು ಅಭಿಪ್ರಾಯಪಡಬೇಕಾಗಿದೆ.ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬನೆಯಾಗಿ ಮೇಲೆ ಹೇಳಲಾದ ಮನೌರ ಖತೂನ್ ಮತ್ತು ಇತರರು ಮೊಕದ್ದಮೆಯ ತೀರ್ಪನ್ನು ಅವಲಂಬಿಸಿ, ಮೃತನನ್ನು ಉಚಿತ ಪ್ರಯಾಣಿಕನೆಂದು ಭಾವಿಸಿದ್ದಾಗ್ಯೂ, ವಾಹನದ ಮಾಲೀಕನಿಂದ ನಷ್ಟಪರಿಹಾರವನ್ನು ಸಂದಾಯ ಮಾಡುವುದಕ್ಕೆ ಮತ್ತು ವಸೂಲಿ ಮಾಡುವುದಕ್ಕೆ ವಿಮಾಕರ್ತನಿಗೆ ನಿರ್ದೇಶಿಸಬೇಕಾಗಿದೆ ಎಂದು ನಿವೇದಿಸಿರುತ್ತಾರೆ.ಈ ಸಂಬಂಧದಲ್ಲಿ ವಿಮಾಕರ್ತನ ಪರ ಮಾನ್ಯ ನ್ಯಾಯವಾದಿಗಳು, ಇದು ಪಾಲಿಸಿಯ ಷರತ್ತುಗಳನ್ನು ಉಲ್ಲಂಘಿಸಿರುವ ಮೊಕದ್ದಮೆ ಆಗಿರುವುದಿಲ್ಲವಾದ್ದರಿಂದ, ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಮತ್ತು ವಸೂಲಿ ಮಾಡುವುದಕ್ಕೆ ಆದೇಶವನ್ನು ಹೊರಡಿಸಲಾಗದು ಎಂದು ನಿವೇದಿಸಿಕೊಂಡಿದ್ದಾರೆ.

23. ಸರ್ವೋಚ್ಚ ನ್ಯಾಯಾಲಯವು, ಮನೌರ ಖತೂನ್ ಮತ್ತು ಇತರರ ಚ ಮೊಕದ್ದಮೆಯಲ್ಲಿ ನೀಡಿದ ನಿರ್ಣಯದ 20 ಮತ್ತು 22 ನೇ ಪ್ಯಾರಾಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

20. ಈ ಯಾವುದೇ ನಿವೇದನೆಗಳಲ್ಲಿ ಯಾವುದೇ ಗುಣಾರ್ಹತೆಗಳು ಇಲ್ಲವೆಂದು ನಮಗೆ ಕಂಡುಬರುತ್ತದೆ.ಮೊದಲನೆಯದಾಗಿ, ಮೇಲೆ ಉಲ್ಲೇಖಿಸಲಾದಂತೆ ಈ ಪ್ರಕರಣದ ಸಂಗತಿಗಳಲ್ಲಿ ಮತ್ತು ಸಾಜು ಪಿ, ಪಾಲ್ 2013 ಎಸಿಜೆ 554 (ಎಸ್ಸಿ) ಮೊಕದ್ದಮೆಯಲ್ಲಿ ಒಳಗೊಂಡಿರುವ ಸಂಗತಿಗಳು ಒಂದು ಮೊಕದ್ದಮೆಯ ಸಂಗತಿಗಳಲ್ಲಿ ಸೌಮ್ಯತೆ ಇರುವುದು ನಮಗೆ ಕಂಡುಬರುತ್ತದೆ.ಎರಡನೆಯದಾಗಿ, (ಮೇಲಿನ) ಸಾಜು ಪಿ, ಪಾಲ್ ಮೊಕದ್ದಮೆಯಂತೆ, ಈ ಪ್ರಕರಣವೂ ಸಹ ತು ೦ ಬಾ ಹಳ್ಯ (16 ವರ್ಷಗಳ ಹಿ ೦ ದಿನ) ಮೊಕದ್ದಮೆಯಾಗಿದ್ದರೂ, ಮುದಾರರಿಗೆ ಇನ್ನೂ ನಷ್ಟ ಪರಿಹಾರವನ್ನು ಸಂದಾಯ ಮಾಡಲಿಲ್ಲವೆಂಬ ಕಾರಣ ಮಾತ್ರದಿಂದಲೇ ಈ ಅಪೀಲುಗಳಲ್ಲಿ ಕ್ಲೇಮು ಮಾಡಿದ ಪರಿಹಾರವನ್ನು ನೀಡಲು ಅ ಕ್ಲೇಮುದಾರರಿಗೆ ಈ ಮೊಕದ್ದಮೆಯನ್ನು ಆಧಾರವಾಗಿಟ್ಟುಕೊಂಡು ನಿರಾಕರಿಸಲು ಸಾಧ್ಯವಾಗದು.ಮೂರನೆಯದಾಗಿ, ನ್ಯಾಯಾಲಯವು, ಸಾಜು ಪಿ, ಪಾಲ್ನ (ಮೇಲಿನ) ಮೊಕದ್ದಮೆಯಲ್ಲಿನ ತೀರ್ಪಿನ 25 ನೇ ಪ್ಯಾರಾದಿಂದ ಸ್ಪಷ್ಟವಾಗಿರುವಂತೆ ಉಚ್ಚ ಪೀಠಕ್ಕೆ ಉಲ್ಲೇಖಿಸಿದ್ದ ಮೊಕದ್ದಮೆಯು ಇತ್ಯರ್ಥದಲ್ಲಿರುವುದರಿಂದ ಇದರಲ್ಲಿ ಕ್ಲೇಮು ಮಾಡಿರುವ ಸ್ವರೂಪದ ಪರಿಹಾರವನ್ನು ಮಂಜೂರು ಮಾಡದಿರುವುದಕ್ಕೆ ಸಂಬಂಧಿಸಿದ ವಾದಗಳನ್ನು ಈಗಾಗಲೇ ಪರಿಗಣಿಸಿ ನಿರಾಕರಿಸಿದೆ.ಇದಲ್ಲದೆ, ವಿಸ್ತೃತ ಪೀಠಕ್ಕೆ ಮಾಡಲಾದ ಉಲ್ಲೇಖವನ್ನು ವಿವಾದವನ್ನು ನಿರ್ಧರಿಸದೆ ಇರಿಸುವ

ಮೂಲಕ ವಿಲೇವಾರಿ ಮಾಡಲಾಗಿದೆ ಎ ೦ ದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನ್ಯಾಯಾಲಯದಲ್ಲಿ ತಿಳಿಸಿರುತ್ತಾರೆ.ಈ ಕಾರಣಗಳಿಂದಾಗಿಯೇ ವಾದವು ಇನ್ನು ಉಳಿಯುವುದಿಲ್ಲ.

22. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ಸಾಜು ಪಿ, ಪಾಲ್ ಮೊಕದ್ದಮೆ, 2013 ಎಸಿಜೆ 554 (ಎಸ್ಸಿ) ಯ 25 ನೇ ಪ್ಯಾರಾದಲ್ಲಿ ವಿಧಿಸಿದ ಕಾನೂನಿನ ಪ್ರಕಾರ, ಈ ಮೊಕದ್ದಮೆಯಲ್ಲಿ ಉದ್ಭವಿಸಿದ ಅಮಲ್ಜಾರಿ ವ್ಯವಹರಣೆಗಳಲ್ಲಿ ಆಪಾದಿತ ವಾಹನದ ಚಾಲಕನ ನಿರ್ಲಕ್ಷ್ಯತೆಯಿಂದಾಗಿ ಉಂಟಾದ ಅಪಘಾತದಲ್ಲಿ ಭಾಗಿಯಾಗಿದ್ದ ಆಪಾದಿತ ವಾಹನದ ವಿಮಾಕರ್ತನಾಗಿರುವ ಮೂರನೆಯ ಪ್ರತಿವಾದಿಯಾದ ಯುನೈಟೆಡ್ ಇನ್ಶೂರೆನ್ಸ್ ಕಂಪನಿಗೆ, ಮೊದಲು ಅಪೀಲುದಾರರಿಗೆ (ಕ್ಲೇಮುದಾರರಿಗೆ) ಐತೀರ್ಪಿನಲ್ಲಿ ಹೇಳಲಾದ ಹಣವನ್ನು ಸಂದಾಯ ಮಾಡಿ, ನಂತರ ಆಪಾದಿತ ವಾಹನದ ಮಾಲೀಕನಿಂದ ತಾನು ಸಂದಾಯ ಮಾಡಿದ ಐತೀರ್ಪು ನೀಡಲಾದ ಮೊತ್ತವನ್ನು ವಸೂಲಿ ಮಾಡುವಂತೆ ಅವರಿಗೆ (ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, 3 ನೇ ಪ್ರತಿವಾದಿ) ನಿರ್ದೇಶನವನ್ನು ನೀಡುವುದು ಎಂಬುದು ನಮ್ಮ ಅಭಿಪ್ರಾಯವಾಗಿದೆ.

24. ಮೃತನು ಸರಕುಗಳ ವಾಹನದಲ್ಲಿ ಉಚಿತ ಪ್ರಯಾಣಿಕನಾಗಿ ಪ್ರಯಾಣಿಸುತ್ತಿರುವಾಗಲೂ ಸಹ, ವಿಮಾಕರ್ತನು ಪರಿಹಾರವನ್ನು ಪಾವತಿಸುವುದಕ್ಕೆ ನಿರ್ದೇಶಿಸಿದೆ ಮತ್ತು ವಿಮಾಕರ್ತನ ವಿರುದ್ಧ ಅಮಲ್ಜಾರಿ ಅರ್ಜಿಯನ್ನು ದಾಖಲಿಸುವ ಮೂಲಕ ವಾಸ್ತವಿಕ ವ್ಯವಹರಣೆಗಳಲ್ಲಿ ವಾಹನದ ಮಾಲೀಕನಿಂದ ಪರಿಹಾರವನ್ನು ವಸೂಲಿ ಮಾಡುವುದಕ್ಕೆ ವಿಮಾಕರ್ತನಿಗೆ ನಿರ್ದೇಶಿಸಬೇಕಾಗುತ್ತದೆ.ಈ ಸನ್ನಿವೇಶಗಳಲ್ಲಿ, ಈ ನ್ಯಾಯಾಲಯವು ಈ ಮೊಕದ್ದಮೆಯಲ್ಲಿ ರುಜುವಾತಾದ ಸಂಗತಿಗಳನ್ನು ಈ ತೀರ್ಪು ಯಥಾವತ್ತಾಗಿ ಒಳಗೊಳ್ಳುತ್ತದೆ ಮತ್ತು ಪರಿಹಾರದ ಹಣವನ್ನು ಸಂದಾಯ ಮಾಡಿ ವಸೂಲಿ ಮಾಡುವುದಕ್ಕಾಗಿ ಆದೇಶವನ್ನು ಹೊರಡಿಸುವುದು ನ್ಯಾಯಯುತವಾಗಿದೆ ಮತ್ತು ಅಗತ್ಯವಾಗಿದೆ ಎಂದು ಅಭಿಪ್ರಾಯಪಡುತ್ತದೆ.ತದನುಸಾರವಾಗಿ ಐತೀರ್ಪನ್ನು ಪಾಲಿಸುವಂತೆ ಮತ್ತು ವಿಮೆಯಿಂದ ವಸೂಲಿ ಮಾಡುವುದಕ್ಕೆ ಅಮಲ್ಜಾರಿ ಅರ್ಜಿಯನ್ನು ದಾಖಲಿಸುವ ಮೂಲಕ ವಾಸ್ತವಿಕ ವ್ಯವಹರಣೆಗಳಲ್ಲಿ ವಿಮಾಕರ್ತನಿಂದ ಅದನ್ನು ವಸೂಲು ಮಾಡುವಂತೆ ವಿಮಾಕರ್ತನಿಗೆ ನಿರ್ದೇಶಿಸಬೇಕಾಗುತ್ತದೆ.

25. ಕೇಮುದಾರರು ನಷ್ಟ ಪರಿಹಾರವನ್ನು ಹೆಚ್ಚಿಸುವಂತೆ ಪ್ರಾರ್ಥಿಸಿರುವರು.ಪ್ರಶ್ನಿತ ಅಪಘಾತವುದಿನಾಂಕ: 27.6.2007 ರಂದು ಸಂಭವಿಸಿದೆ.ನ್ಯಾಯಾಧಿಕರಣವು ನಷ್ಟ ಪರಿಹಾರವನ್ನು ನೀಡುವುದಕ್ಕಾಗಿ ಮೃತನ ಮಾಸಿಕ ಆದಾಯ 3,000/ರೂಪಾಯಿ ಆಗಿದೆಯೆಂದು ಪರಿಗಣಿಸಿದೆ.ಮೃತನ ಮರಣೋತ್ತರ ವರದಿ ನಿಶಾನೆ.ಪಿ 4 ರಲ್ಲಿರುವಂತೆ ಮೃತನ ವಯಸ್ಸು 32 ವರ್ಷಗಳೆಂದು ಪರಿಗಣಿಸಿದೆ.ಲೋಕ್ ಅದಾಲತ್ ಮುಂದೆ ಮೊಕದ್ದಮೆಗಳ ಇತ್ಯರ್ಥಕ್ಕಾಗಿ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಜಾರಿ ಮಾಡಿದ ಮಾರ್ಗಸೂಚಿಗಳ ಪ್ರಕಾರ, 2007 ನೇ ವರ್ಷದಲ್ಲಿ ಸಂಭವಿಸಿದ ಅಪಘಾತಕ್ಕಾಗಿ ಮೃತನ ಕಾಲ್ಪನಿಕ ಆದಾಯವಾಗಿ ಮಾಸಿಕ 4,000/- ರೂಪಾಯಿಗಳೆಂದು ಪರಿಗಣಿಸಬೇಕಿದೆ.ಕೇಮುದಾರರು ಸಹ ಭವಿಷ್ಯದ ನಿರೀಕ್ಷೆಯ ನಷ್ಟಕ್ಕಾಗಿ ಶೇ .40 ರಷ್ಟು ನಷ್ಟ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿದ್ದು, ಅದನ್ನು 1,600/- ರೂ.ಗಳೆಂದು ಪರಿಗಣಿಸಲಾಗಿದೆ.ಮೃತನ ಒಟ್ಟು ಆದಾಯವೆಂದು 5,600/-ರೂಪಾಯಿಗಳೆಂದು ಪರಿಗಣಿಸಿದೆ, ಇದರಲ್ಲಿ ಮೃತನ ವೈಯಕ್ತಿಕ ಮತ್ತು ಜೀವನ ವೆಚ್ಚವಾಗಿ 1/ 4 ನೇ ಭಾಗದ ಆದಾಯವನ್ನು ಕಡಿತಗೊಳಿಸಿದರೆ, ಅವಲಂಬನೆಯ ನಷ್ಟವನ್ನು ಲೆಕ್ಕ ಹಾಕುವುದಕ್ಕಾಗಿ ಉಳಿದ ಮಾಸಿಕ ಆದಾಯದ ಮೊತ್ತವಾಗಿ 4,200/- ರೂಪಾಯಿಗಳನ್ನು ಪರಿಗಣಿಸಬೇಕಾಗುತ್ತದೆ.ಅಂದರೆ ಅವಲಂಬನೆ ನಷ್ಟಕ್ಕೆ ಸಂಬಂಧಿಸಿದಂತೆ ಒಟ್ಟು

8,06,400/-ರೂಪಾಯಿಗಳನ್ನು (4,200x12x17) ನೀಡಿದೆ.ಕ್ಲೇಮುದಾರರು ರೂಢಿಗತ ಶೀರ್ಷಿಕೆಯ ಅಡಿಯಲ್ಲಿ 70,000/-ರೂಪಾಯಿಗಳಿಗೂ ಸಹ ಹಕ್ಕುಳ್ಳವರಾಗಿರುವರು.ಆದುದರಿಂದ ಕ್ಲೇಮುದಾರರು ನ್ಯಾಯಾಧಿಕರಣವು ನೀಡಿದ್ದ 5,47,000/-ರೂಪಾಯಿಗಳಿಗೆ ಪ್ರತಿಯಾಗಿ 8,76,400/-ರೂಪಾಯಿಗಳನ್ನು ಪಡೆಯಲು ಹಕ್ಕುಳ್ಳವರಾಗಿರುವರು.ಆ ಮೂಲಕ ಅರ್ಜಿ ಸಲ್ಲಿಕೆಯ ದಿನಾಂಕದಿಂದ ಅದನ್ನು ವಸೂಲಿ ಮಾಡುವವರೆಗೆ ವಾರ್ಷಿಕ ಶೇ .6 ರ ಬಡ್ಡಿದರದೊಂದಿಗೆ 3,29,400/ರೂಪಾಯಿಗಳ ಹೆಚ್ಚಿನ ನಷ್ಟ ಪರಿಹಾರವನ್ನು ಪಡೆಯಲು ಕ್ಲೇಮುದಾರರು ಹಕ್ಕುಳ್ಳವರಾಗಿರುವರು.

26. ಮೇಲೆ ಹೇಳಲಾದ ಕಾರಣಕ್ಕಾಗಿ, ಅಪೀಲು ಭಾಗಶಃ ಸಫಲವಾಗಿರುತ್ತದೆ ಮತ್ತು ತದನುಸಾರವಾಗಿ, ಈ ನ್ಯಾಯಾಲಯವು ಈ ಮುಂದಿನಂತೆ ಆದೇಶಿಸಿದೆ:

## ಆದೇಶ

ವಾಹನದ ಮಾಲೀಕರಾದ 1 ನೇ ಪ್ರತಿವಾದಿಯ ಮೇಲೆ ಹೊಣೆಗಾರಿಕೆಯನ್ನು ವಿಧಿಸಿ 2 ನೇ ಪ್ರತಿವಾದಿಯನ್ನು ದೋಷಮುಕ್ತಗೊಳಿಸುವುದಕ್ಕೆ ಸಂಬಂಧಪಟ್ಟ ಮಟ್ಟಿಗೆ, I ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಹೆಚ್ಚುವರಿ ಎಂಎಸಿಟಿ, ಧಾರವಾಡ ಇವರ ಕಡತದಲ್ಲಿನ ಎಂವಿಸಿಸಂಖ್ಯೆ: 512/2008 ರಲ್ಲಿ ಹೊರಡಿಸಿದದಿನಾಂಕ: 04.02.2012 ರ ತೀರ್ಪು ಮತ್ತು ಐತೀರ್ಪನ್ನು, ವಜಾಗೊಳಿಸಲಾಗಿದೆ.

2 ನೇ ಪ್ರತಿವಾದಿಯಾದ ವಿಮಾಕರ್ತನಿಗೆ, ಕ್ಲೇಮುದಾರರಿಗೆ ಈ ಮೊಕದ್ದಮೆಯ ಐತೀರ್ಪಿನಲ್ಲಿ ನೀಡಲಾದ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಮತ್ತು ಅಮಲ್ಜಾರಿ ಅರ್ಜಿಯನ್ನು ದಾಖಲಿಸುವ ಮೂಲಕ ವಾಸ್ತವಿಕ ವ್ಯವಹರಣೆಯಲ್ಲಿ ವಿಮಾದಾರ 1 ನೇ ಪ್ರತಿವಾದಿಯಿಂದ ಸಂದಾಯ ಮಾಡಿದ ನಷ್ಟ ಪರಿಹಾರವನ್ನು ವಸೂಲಿ ಮಾಡುವುದಕ್ಕೆ ಈ ಮೂಲಕ ನಿರ್ದೇಶಿಸಲಾಗಿದೆ.

ಅಪೀಲುದಾರರು, ಅಪೀಲು ಅರ್ಜಿ ಸಲ್ಲಿಸಿದ ದಿನಾಂಕದಿಂದ ವಸೂಲು ಮಾಡುವವರೆಗೆ ಶೇ .6 ರಷ್ಟು ಬಡ್ಡಿ ದರದೊಂದಿಗೆ ಹೆಚ್ಚಿಸಲಾದ ನಷ್ಟ ಪರಿಹಾರವಾದ 3,29,400/-ರೂಪಾಯಿಗಳನ್ನು ಪಡೆಯಲು ಹಕ್ಕುಳ್ಳವರಾಗಿರುವರು.

2 ನೇ ಪ್ರತಿವಾದಿ/ವಿಮಾಕರ್ತನಿಗೆ ನ್ಯಾಯಾಧಿಕರಣದ ಮುಂದೆ 60 ದಿನಗಳ ಅವಧಿಯೊಳಗಾಗಿ ನಷ್ಟ ಪರಿಹಾರದ ಮೊತ್ತವನ್ನು ಠೇವಣಿ ಇಡುವುದಕ್ಕೆ ನಿರ್ದೇಶಿಸಿದೆ.

ನಷ್ಟ ಪರಿಹಾರದ ಹಂಚಿಕೆ, ಠೇವಣಿ ಮತ್ತು ಬಟವಾಡೆಗಳು ನ್ಯಾಯಾಧಿಕರಣದ ಆದೇಶದ ಪ್ರಕಾರ ಇರತಕ್ಕದ್ದು.